Sectt. II-48—1

Revenue (192 /) Department.

Miscellaneous SERIES.

G.O. No. 2005

DATED 8-9-1921

[Despatch Abstract.]

Alienation - land & rebenue (South Kanara) - Gudi Jalada and Koran - vadabar Sanctioned

REVENUE DEPARTMENT.

4749 Rev. D
27/8/21

Received ..... 191 Registered 191

D

Subject.



Alienation - Land and Revenue (South Kanara)

Udipi taluk and town - Nadavar Sangha - Hostel etc.,

Enclosures.
No.
Spare copies

Reference No. C.1226-21-2

Station MADRAS, Dated the the 31st May.

From (Name) L. H. Arndt Esquire, I.C.S.,

(Designation) Secretary, Board of Revenue,
Land Revenue.

To The Secretary to Government,
Revenue Department.

Sir, L.T. Harris Esquire, I.C.S.,
Commissioner of Land Revenue.

Read the following papers:-

Letter from R.H. Ellis Esquire, I.C.S., Collector of South Kanara, Ref. P.R.1330/Rev/20 dated the 18th March 1921.

Board's Reference thereon No.C.1226-21-1, dated the 12th April 1921.

Letter from R.H. Ellis Esquire, I.C.S., Collector of

South

South Kanara, II Ref. P.R.1330/Rev/20. dated the 17th May 1921.

Reference No.C.1226-21-2, dated the 31st May 1921.

Reference

At the instance of the Collector of South Kanara the Board recommends to Government the alienation of land and revenue detailed in the enclosed statements.

2. The grant. if sanctioned, will be subject to the following conditions to which the alienee has agreed.

(1) The land shall be used for the purposes of a hostel with play-ground and a garden and for no other purposes.

(2) The hostel shall be constructed within a period of two years from the date of the grant

(3) The Government may resume the land wholly or in part in the event of the infringement of either of these conditions or if Government consider that the hostel is not properly conducted or if resumption is considered necessary in the public interests.

(4) In the event of such resumption or of the acquisition of the land by Government either wholly or in part, the compensation payable shall not exceed the initial cost or the

value at the time of resumption or acquisition, whichever shal be less of the buildings which have been erected on the land the cost of the Sangha.

(5) In the event of the voluntary relinquishment of th site by the Sangha no compensation shall be payable for any improvements that may have been effected or other works execute on the land by the Sangha.

L H Arndt.
3. 6. 21.
Secretary.

ದಕ್ಷಿಣ ಕನ್ನಡ ಜಿಲ್ಲಾ

ಬಂಟರ ಯಾನೆ ನಾಡವರ ಸಂಘದವರ

ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದ

ನಿಬಂಧನೆಗಳು.

ಮಂಗಳೂರು.

ಮಂಗಳೂರು ಕೆನರಾ ಭಾಷಾಪಾನೆಯಲ್ಲಿ ಮುದ್ರಿಸಲ್ಪಟ್ಟಿತು.

1921.

1

ದಕ್ಷಿಣ ಕನ್ನಡಾ ಜಿಲ್ಲಾ
ಬಂಟರ ಯಾನೆ ನಾಡವರ ಸಂಘದವರ
ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದ
ನಿಬಂಧನೆಗಳು.

1. ವಿದ್ಯಾರ್ಥಿ ಭವನದ ಆಡಳಿತೆಯು ಸಂಘದ ಕಾರ್ಯ ನಿರ್ವಾಹಕ ಸಭೆಯ ಮೆಂಬರರ ಸೈಕಿ ಪ್ರತಿ ವರ್ಷ ಆರಿಸಲ್ಪಟ್ಟ 9 ಜನ ಸಭಾಸದರ ಕೈಕೆಳಗಿರುವುದು. ಇವರಿಂದ ಸುಪರಿಂಟೆಂಡೆಂಟ (ಮೇಲ್ವಿಚಾರಕ) ರ ಕೆಲಸಕ್ಕೆ ನೇಮಿಸಲ್ಪಟ್ಟವರು ಭವನದ ಕಾರ್ಯ ನಿರ್ವಾಹಗಳನ್ನು ನಡಿಸುವರು.

2. ಸ್ವಜಾತಿಯ ವಿದ್ಯಾರ್ಥಿಗಳಲ್ಲಿ ಒಳ್ಳೇ ನಡತೆ ವ ಗುಣ ಗಳಿರುವವರನ್ನೆ ಭವನಕ್ಕೆ ಸೇರಿಸಿಕೊಳ್ಳಲಾದೀತು.

3 ಭವನಕ್ಕೆ ಪ್ರವೇಶ ಕೊಡುವಲ್ಲಿ ಸಂಘದ ಮೆಂಬರರ ಮಕ್ಕಳ ಯಾ ಇವರ ರಕ್ಷಣೆಯಲ್ಲಿರುವ ಇತರ ವಿದ್ಯಾರ್ಥಿಗಳ ಪರ ವಾಗಿ ಮಾಡಿದ ಮನವಿಗಳು ಇತರರ ಮನವಿಗಳಿಗಿಂತ ಮುಂದಾಗಿ ಮನ್ನಿಸಲ್ಪಡುವವು. ಉಳಿದವರ ವಿಷಯದಲ್ಲಿ ಅವರವರ ಅರ್ಜಿಗಳಿಗೆ ಅವುಗಳು ತಲಪಿದ ದಿನಾನುಕ್ರಮವಾಗಿ ಗಮನಕೊಡಲಾದೀತು.

4. ಭವನವನ್ನು ಪ್ರವೇಶಿಸಲಿಕ್ಕೆ ಅಪೇಕ್ಷಿಸುವ ವಿದ್ಯಾರ್ಥಿಯ ತಾಯಿಗಳಾಗಲಿ, ರಕ್ಷಕರಾಗಲಿ ಮೇಲ್ವಿಚಾರಕನಿಗೆ ಮನವಿಯನ್ನು ಇದರೊಂದಿಗೆ ಛಾಪಿಸಿರುವ ಫೋರ್ಮಿಗನುಗುಣವಾಗಿ

ಬರಕೊಳ್ಳಬೇಕು. ಹಾಗೆ ಬರಕೊಳ್ಳುವವರು
ನಡತೆಗೂ, ಆತನಿಂದ ಭವನಕ್ಕೆ ಬರತಕ್ಕ ಹಣವನ್ನು ಸಲ್ಲಸಲಿಕ್ಕೂ
ಹೊಣೆಯಾಗಿರುವರು. ವಿದ್ಯಾರ್ಥಿಯನ್ನು ಭವನಕ್ಕೆ ಸೇರಿಸುವಾಗ
ಅಥವಾ ಸೇರಿಸಿದ 1 ವಾರದ ಒಳಗೆ ಆತನ ರಕ್ಷಕರು ಸ್ವತಹ ಬಂದು
ಭವನದ ಮೇಲ್ವಿಚಾರಕರನ್ನು ಕಾಣುವುದಲ್ಲದೆ ಭವನವನ್ನು ಆಗಾಗ
ಸಂದರ್ಶಿಸಿ ವಿದ್ಯಾರ್ಥಿಯ ವಿಚಾರವನ್ನು ತಿಳಿದುಕೊಂಡು ಇರ
ತಕ್ಕದ್ದು.

5. ಪ್ರತಿ ಒಬ್ಬ ವಿದ್ಯಾರ್ಥಿಯು ಪ್ರವೇಶವಾಗುವಾಗಲೇ 2
ರೂಪಾಯಿ ಪ್ರವೇಶಧನವನ್ನು ಕೊಡಬೇಕು. ಪುನಃ ಪ್ರವೇಶವಾಗು
ವಲ್ಲಿ ರೂಪ್ಯಾ ಒಂದು ಮಾತ್ರ ಪ್ರವೇಶ ಹಾಸಲಾಗಿ ಕೊಡತಕ್ಕದ್ದು.

6. ಪ್ರತಿ ಒಬ್ಬ ವಿದ್ಯಾರ್ಥಿಯು ಭವನಕ್ಕೆ ಸೇರುವ ಕಾಲದಲ್ಲಿ
2 ತಿಂಗಳ ಭವನದ ಊಟದ ಫೀಸನ್ನು ಶೇವಣಾತಿಯಾಗಿ ಕೊಡ
ತಕ್ಕದ್ದು. ಭವನವನ್ನು ಬಿಟ್ಟು ಹೋಗುವಾಗ ಆ ಹಣವನ್ನು ಆವನ
ಲೆಕ್ಕಕ್ಕೆ ವಜಾಮಾಡಿ ಉಳಿಯಬಹುದಾದ ಮೊಬಲಗು ಅವನಿಗೆ
ಕೊಡಲಾದೀತು. ಪ್ರತಿ ಒಬ್ಬ ನಿವಾಸಿಕನು ಭವನವನ್ನು ಪ್ರವೇಶಿಸಿದ
ಮೇಲೆ ತನಗ ಬೇಕಾದ ಕುರ್ಚಿ, ಮೇಜು, ಮಂಚ. ದೀಪ ಮೊದಲಾ
ದವುಗಳನ್ನು ತಾನೇ ಒದಗಿಸಿಕೊಳ್ಳಬೇಕು.

7. ಊಟ ವಗೈರೆಯ ಪ್ರತಿ ಒಂದು ತಿಂಗಳ ಫೀಸನ್ನು ಅದರ
ನುರು ತಿಂಗಳ 15ನೇ ತಾರೀಕಿನ ಒಳಗೆ ಮೇಲ್ವಿಚಾರಕನಿಗೆ ವಸೂಲು
ಕೊಡಬೇಕಾಗಿರುವುದು. ಹೀಗೆ ವಸೂಲು ಕೊಡುವರೆ ತಪ್ಪಿದ್ದಲ್ಲಿ
ಆಯಾ ತಿಂಗಳ 15ನೇ ತಾರೀಕಿನ ನಂತರ ವಿಳಂಬವಾಗುವ ಪ್ರತಿ
ದಿನಕ್ಕೆ 6ಪೈಗಳಂತೆ ದಂಡ ತೆಗಿಯಲಾದೀತಲ್ಲದೆ, ಈ ರೀತಿ ತಪ್ಪಿದ

ತಾರೀಕಿನ ವರೆಗೂ ಹಣವನ್ನು ಕೊಡದಿದ್ದರೆ, ಕೊಡದ ವಿದ್ಯಾರ್ಥಿಯನ್ನು ಭವನದಿಂದ ಹೊರಪಡಿಸಲಿಕ್ಕೆ ಮೇಲ್ವಿಚಾರಕನಿಗೆ ಅಧಿಕಾರವಿದೆ. ಆದರೆ ಅಂಥಾ ವಿದ್ಯಾರ್ಥಿಯು ತನ್ನಿಂದ ಸಲ್ಲತಕ್ಕ ಹಣವನ್ನೂ ಪುನಃ ಪ್ರವೇಶಧನವನ್ನೂ ಕೊಟ್ಟಲ್ಲಿ ಅವನನ್ನು ಪುನಃ ಭವನದಲ್ಲಿ ಸೇರಿಸಿಕೊಳ್ಳಬಹುದು.

8. ಭವನಕ್ಕೆ ಸೇರುವನರು ತಿಂಗಳ ಮಧ್ಯದಲ್ಲಿ ಯಾವ ತಾರೀಕಿನಲ್ಲಾದರೂ ಸೇರಿದ್ದಲ್ಲಿ ಅಂಥವರು ಭವನದಲ್ಲಿ ವಾಸಿಸಿರುವ ದಿವಸ 1ರ 2 ಆಣೆಯನ್ನು ದಿನಸದ ಫೀಸಿಗೆ ಕೂಡಿಸಿಯಾಗಲಿ, ಭವನದಲ್ಲಿ ಅಂಥವರು ವಾಸಿಸದೆ ಇರುವ ದಿವಸ 1ರ 1 ಆಣೆಯನ್ನು ಫೀಸಿನಿಂದ ಕಳದುಯಾಗಲಿ ಕೊಡತಕ್ಕದ್ದು.

9. ಅನುಜ್ಞೆಯನ್ನು ಪಡದು 3 ದಿವಸಗಳಿಗಿಂತ ಹೆಚ್ಚಿನ ಕಾಲ ಭವನವನ್ನು ಬಿಟ್ಟಿರುವ ನಿವಾಸಿಕರು ಆ ಹೆಚ್ಚಿನ ದಿವಸಗಳಿಗೆ 8ನೇ ನಿಬಂಧನೆ ಪ್ರಕಾರ ವಜಾ ಪಡೆಯಲು ಅರ್ಹರಾಗಿರುವರು.

10. ಪ್ರತಿ ಒಬ್ಬ ವಿದ್ಯಾರ್ಥಿಯು ರಜೆ ತಿಂಗಳುಗಳಲ್ಲಿ ಭವನದ ದಾಗುದೂಜಿ ಬಗ್ಗೆ ತಿಂಗಳಿಗೆ 12 ಆಣೆಗಳಂತೆ ಕೊಡಬೇಕು.

11. ವಾಸ್ತವಿಕವಾಗಿ ಸ್ವತಹಾ (ಪಾಠಶಾಲೆಗೆ ಸೇರದೆ) ವಿದ್ಯಾಭ್ಯಾಸ ಮಾಡುವುದಕೋಸ್ಕರ ಭವನವನ್ನು ಸೇರಲಿಚ್ಛಿಸುವ ವಿದ್ಯಾರ್ಥಿಗಳನ್ನು ಭವನದ ನಿಯಮಾನುಸಾರವಾಗಿ ಸೇರಿಸಿಕೊಳ್ಳಬಹುದು. ಅದರಂತೆ ಪರವೂರಿನಲ್ಲಿ ಕಲಿಯುವ ಮತ್ತು ಪರೀಕ್ಷೆ ಬಗ್ಗೆ ಪರವೂರಿಗೆ ಹೋಗುವ ಅಥವಾ ಪರಸ್ಥಳದಿಂದ ಬರುವ ವಿದ್ಯಾರ್ಥಿಗಳು ಭವನದಲ್ಲಿ ಉಳಕೊಳ್ಳಬಹುದು.

12. (a) ಭವನದಲ್ಲಿ ಅನುಕೂಲಿಸಿದ್ದಕ್ಕಿಂತ ಹೆ [illegible]ವನ್ನು ಅಪೇಕ್ಷಿಸುವ ಯಾವನೊಬ್ಬ ನಿವಾಸಿಕನು ಮೇಲ್ವಿಚಾರಕನ ಅನುಮತಿಯನ್ನು ಪಡೆದು ತಕ್ಕ ನಿಲಿವಾರಿಯನ್ನು ಮಾಡಬಹುದು.

(b) ಆಸ್ವಸ್ಥ ನಿವಾಸಿಕರಿಗೆ ವೈದ್ಯನು ಹೇಳಿದ ಪಥ್ಯೋಪಚಾರಗಳನ್ನು ಮಾಡಲಾದೀತು. ಆ ಸಂಬಂಧ ತಿಂಗಳಗಟ್ಟಿ ಮೌಲ್ಯಕ್ಕಿಂತ ಹೆಚ್ಚಿನ ವೆಚ್ಚವಾದರೆ ಮಿಕ್ಕ ಅಂಶವನ್ನು ನಿವಾಸಿಕನು ಸಹಿಸಿಕೊಳ್ಳಬೇಕು.

13. (a) ನಿವಾಸಿಕರ ಹಾಜರಿಯು ದಿವಸಕ್ಕೆ ಎರಡು ಸಾರಿ ಮುಂಜಾನೆ ಮತ್ತು ಸಂಜೆ ಕರೆಯಲಾದೀತು. ಕರೆಯುವಾಗ ಅನುಮತಿಯನ್ನು ಪಡೆಯದೆ ಹೋಗಿರುವವರನ್ನು ಗೈರ್‌ಹಾಜರೆಂದು ಎಣಿಸಲಾದೀತು. ಅವರು ಶಿಕ್ಷೆಗೆ ಒಳಗಾಗುವರು.

(b) ನಿವಾಸಿಕರಲ್ಲಿ ಯಾರಾದರೂ ಸಂಜೆಗೆ ಹಾಜರು ಕರೆದ ನಂತರ ಮೇಲ್ವಿಚಾರಕನ ಅನುಮತಿಯನ್ನು ಪಡಕೊಳ್ಳದೆ ಭವನದ ವತಾರವನ್ನು ಬಿಟ್ಟು ಹೋಗಕೂಡದು. ನಿರ್ವಾಹವಿಲ್ಲದ ಸಂದರ್ಭದಲ್ಲಿ ಪ್ರಿಫೆಕ್ಟರಲ್ಲಿ ಒಬ್ಬನ ಅನುಮತಿಯನ್ನು ಪಡೆದು ಹೋಗಬಹುದು. ಶಾಲಾ ದಿವಸಗಳಲ್ಲಿ ಮೇಲ್ವಿಚಾರಕನ ಅನುಮತಿ ಇಲ್ಲದೆ ಶಾಲೆಯಿಂದ ಗೈರುಹಾಜರಾಗಕೂಡದು.

(c) ಒಬ್ಬ ನಿವಾಸಿಕನು ಇನ್ನೊಬ್ಬನ ಕೋಣೆಯನ್ನು ಅವನ ಅನುಮತಿ ಇಲ್ಲದೆ ಪ್ರವೇಶಿಸಕೂಡದು. ಸಾಧ್ಯವಾದ ಮಟ್ಟಿಗೆ ಬೇಧಿಯವರ ಕೋಣೆಯಲ್ಲಿ ಹೋಗುವುದನ್ನು ಕಡಿಮೆ ಮಾಡಬೇಕು.

(d) ನಿವಾಸಿಕರು ಕಟ್ಟೋಣಿಗಳನ್ನು, ಯಾ, ಸೊತ್ತುಗಳ ಯಾವ ನಿಧಿಯಿಂದಲಾದರೂ ಹಾಳುಮಾಡಲೂ ವಿರೂಪ ಪಡಿಸಲೂ

ಕ್ಕೆ ಪದ: ಹಾಗೆ ಮಾಡಿದರೆ ಹಾಳು ಮಾಡಿದ ಅಥವಾ ವಿರೂಪ ಪಡಿಸಿದ ಒಡನೆಯನ್ನು ಹೊಸತಾಗಿ ಅಥವಾ ಸರಿಪಡಿಸಿ ಇಡಲಿಕ್ಕೆ ಅಥವಾ ಇಡುವ ಖರ್ಚನ್ನು ಕೊಡಲಿಕ್ಕೆ ಬದ್ಧರಾಗಿರುವರು.

(e) ನಿವಾಸಿಕರು ತಮ್ಮ ಕೋಣೆ, ಜಗಲಿ, ಬಟ್ಟೆಬಡಿಗೆ ಮೊದಲಾದವುಗಳನ್ನು ಜೊಕ್ಕಟವಾಗಿ ಇಡಬೇಕು.

(f) ನಿವಾಸಿಕರು ಬೀಡಿ ಮುಂತಾದವುಗಳನ್ನು ಸೇದುವುದು ಪೂರ್ಣ ನಿಷಿದ್ಧವಾಗಿರುತ್ತದೆ.

(g) ಆಡುವ ಸಮಯದಲ್ಲಿ ಆಲ್ಲದೆ ಬೇರೆ ಎಲ್ಲಾ ಸಮಯಗಳಲ್ಲಿಯೂ ವಿದ್ಯಾರ್ಥಿಗಳು ಗುಲ್ಲು ವಗೈರೆ ಮಾಡದೆ ಕ್ರಮವಾಗಿ ನಡಕೊಳ್ಳತಕ್ಕದ್ದು.

14. (a) ನಿವಾಸಿಕರಲ್ಲಿ ಯಾರಿಗಾದರೂ ಹೇಳಲಿಕ್ಕಿರುವ ಲಾದಿ ರನ್ನು ಫಿರಿಯಾದಿ ಪುಸ್ತಕದಲ್ಲಿ ಬರೆದಿಟ್ಟರೆ ಅದನ್ನು ವಿಚಾರಿಸ ತು.

(b) ಅವಿಧೇಯತೆ, ದುರಾಚಾರ, ಕಟ್ಟಳೆಗಳಿಗೆ ವಿರುದ್ಧವಾದ ನಡತೆ ಅಥವಾ ಮೇಲ್ವಿಚಾರಕನು ಶಿಕ್ಷಾರ್ಹರೆಂದು ತಿಳಿಯುವ ಇತರ ಯಾವದೊಂದು ಹೇತುವಿನಿಂದ ಆಯಾ ಸಂದರ್ಭಾನುಸಾರ (ಅಪರಾಧಕ್ಕೆ ತಕ್ಕಂತೆ) ದಂಡ ತೆರಲಿಕ್ಕೆ ಅಥವಾ ಬೇರೆ ವಿಧದ ಶಿಕ್ಷೆಗೆ ನಿವಾಸಿಕರು ಗುರಿಯಾಗುವರು.

15. ವಿದ್ಯಾರ್ಥಿಯು ದೇಹದಲ್ಲಿ ವ್ಯಾಧಿತನಾದರೆ ಅಥವಾ ಬೇರೆ ಯಾವ ಕಾರಣಗಳಿಂದಾದರೂ ಭವನನಿವಾಸಕ್ಕೆ ಅಕ್ಷೇಪಕರನಾಗಿ ತೋರಿದರೆ ಅಂಥಾ ಯಾವನೊಬ್ಬ ವಿದ್ಯಾರ್ಥಿಯನ್ನು ಭವನದಿಂದ ಹೊರಪಡಿಸುವ ಅಧಿಕಾರವು 1ನೇ ನಿಯಮದಲ್ಲಿ ನಮೂದಿಸಿದ ಅಡಳಿತೆ ಕಮಿಟಿಯವರಿಗಿರುವುದು.

16 (*a*) ಮೇಲ್ವಿಚಾರಕನು ವಿದ್ಯಾರ್ಥಿಗಳಲ್ಲಿ ಕೆಲ ಖಂಡರನ್ನು (Prefects) ಈ ಕುರಿತು ಮಾಡಿರುವ ನಿಯಮಗಳಿಗನುಸಾರವಾಗಿ ನೇಮಿಸಿ ಅವರ ಸಹಾಯದಿಂದ ಭವನದ ಕಾರ್ಯನಿರ್ವಾಹವನ್ನು ನಡೆಯಿಸತಕ್ಕದ್ದು.

(*b*) ಕೋಣೆಗಳನ್ನು ಹಂಚಿಕೊಡುವ ಕೆಲಸವು ಮೇಲ್ವಿಚಾರಕನದಾಗಿರುತ್ತದೆ.

(*c*) ವಿದ್ಯಾರ್ಥಿಗಳು ತಿಂಗಳಗಟ್ಲೆ ಕೊಡುವ ಮೌಲ್ಯಕ್ಕೆ ತಕ್ಕಾರದ ಹಾಗೆ ಭೋಜನದ ವ್ಯವಸ್ಥೆಯನ್ನೂ ಇತರ ಖರ್ಚನ್ನೂ ಮಾಡಬೇಕು.

(*d*) ಹೊರಗಿನ ಜನರು ಅಪ್ಪಣೆ ಪಡೆಯದೆ ಭವನಕ್ಕೆ ಬಂದು ವಿದ್ಯಾರ್ಥಿಗಳ ಸಮಯ ಹಾಳುಮಾಡದಂತೆ ಜಾಗ್ರತೆ ಇಡತಕ್ಕದ್ದು.

(*e*) ಮೇಲ್ವಿಚಾರಕನು ಎಲ್ಲಾ ಸೇವಕರು ಮಾಡತಕ್ಕ ಕೆಲಸಗಳನ್ನು ನಿಯಮಿಸಿ ತಮ್ಮ ಕೆಲಸಗಳನ್ನು ಸರಿಯಾಗಿ ಮಾಡದೆ ಇದ್ದಲ್ಲಿ, ಹಾಳು ಮಾಡಿದ್ದಲ್ಲಿ ಅಥವಾ ಉಪೇಕ್ಷಿಸಿದ್ದಲ್ಲಿ ಸಹಾಯಕರನ್ನು ಶಿಕ್ಷಿಸಬಹುದು. ನಿವಾಸಿಕರು ಭವನದ ಸೇವಕರನ್ನು ತಮ್ಮ ಸ್ವಂತ ಕೆಲಸಕ್ಕೆ ಕಳುಹಿಸಕೂಡದು.

13 -- 17 --

1 ಮೇಲ್ವಿಚಾರಕನು ಈ ಕೆಳಗೆ ಹೇಳುವ ರಿಜಿಸ್ಟ್ರಿ ಪ ಲೆಕ್ಕ ಪತ್ರಗಳನ್ನು ಗುಮಾಸ್ಥನಿಂದ ಇಡಿಸತಕ್ಕದ್ದು:—

(1) ವಿದ್ಯಾರ್ಥಿಗಳ ದಾಖಲು ರಿಜಿಸ್ಟ್ರಿ—ಇದರಲ್ಲಿ ಪ್ರತಿ ಒಬ್ಬನು ಸೇರಿದ ತಾರೀಕು, ತಂದೆಯ ಹೆಸರು, ವಾಸಸ್ಥಾನ, ವ್ಯಾಯ, ಅಜ್ಞಾತ ವಿದ್ಯೆಯ ವಿವರ ಮತ್ತು ಆವನ ರಕ್ಷಕನ ಹೆಸರು ವೃತ್ತಿ, ವಾಸಸ್ಥಳ ಇವುಗಳ ವಿವರ ತೋರಬೇಕು.

(2) ನಡತೆಯ ರಿಜಿಸ್ಟ್ರಿ—ಇದರಲ್ಲಿ ಪ್ರತಿ ಒಬ್ಬ ವಿದ್ಯಾರ್ಥಿಯ ಆರೋಗ್ಯ ಸ್ಥಿತಿ, ನಡತೆಯ ವಿವರ ಮತ್ತು ಆತನಿಗೆ ಶಾಲಾ ಪರೀಕ್ಷೆಗಳಲ್ಲಿ ಸಿಕ್ಕಿದ ಮಾರ್ಕುಗಳನ್ನು ಬರೆದಿರಬೇಕು

(3) ಹಾಜರಿ ಪಟ್ಟಿ—ಇದರಲ್ಲಿ ದಿನಂಪ್ರತಿ ಹಾಜರಿ ಕರೆಯು ವಾಗ ಇದ್ದವರ ಯಾರೆಂದು ತೋರಬೇಕು.

(4) ತಿಂಗಳುಗಟ್ಟಿ ಫೀಸಿನ ರಿಜಿಸ್ಟ್ರಿ.

(5) ಜಮಾ ಖರ್ಚನ್ನು ತೋರಿಸುವ ನಗದಿ ಬೂಕು.

(6) ಜಿಂದಿಗೆಗಳ ಲೆಕ್ಕದ ಬೂಕು—ಇದರಲ್ಲಿ ಸಾಮಾನುಗಳು ಅಡಿಗೆ ಪಾತ್ರಗಳು ಮತ್ತು ವಿದ್ಯಾರ್ಥಿ ಭವನದ ಇತರ ಸಾಮಗ್ರಿಗಳ ಲೆಕ್ಕ.

(7) ಉಗ್ರಾಣದ ಲೆಕ್ಕದ ಬೂಕು—ಇದರಲ್ಲಿ ಭೋಜನ ಸಾಹಿತ್ಯದ ಲೆಕ್ಕ

(8) ಸಂಬಳಬಟ್ವಾಡೆ ಪುಸ್ತಕ.

(9) ಅಭ್ಯಾಗತರ ಪರಾಗಳ ಪುಸ್ತಕ.

(10) ಫಿರ್ಯಾದು ಪುಸ್ತಕ.

(11) ರೋಗಿಗಳ ಸಶ್ರೂಷಾಪಚಾರದ ಲೆಕ್ಕ.

18. ಭವನದ ವಿದ್ಯಾರ್ಥಿ ಸಮಾಜ, ಪುಸ್ತ ವಾಚನಾಲಯ, ಆಟದ ಕ್ಲಬ್ಬುಗಳು, ವಸ್ತುಸಂಗ್ರಹಾಲಯ, ಹೂವಿನ ತೋಟ ಮೊದಲಾದವುಗಳು ಸರಿಯಾಗಿ ನಡೆದುಕೊಂಡು ಬರುವಂತೆ ಅವಶ್ಯವುಳ್ಳ ಏರ್ಪಾಡುಗಳನ್ನು ಮೇಲ್ವಿಚಾರಕನು ಮಾಡತಕ್ಕದ್ದು.

19. ಮೇಲ್ವಿಚಾರಕನ ಮೇಲೆ ಬಂದಿರುವ ದೂರುಗಳನ್ನು ಭವನದ ಆಡಳಿತೆ ಕಮಿಟಿಯವರು ಕೇಳಿ ವಿಚಾರಿಸಬೇಕು.

20. ಆಗಿಂದಾಗ ಸಂದರ್ಭಾನುಸಾರವಾಗಿ ಮೇಲಿನ ಕ್ರಮ ಗಳನ್ನು ತಿದ್ದಲಿಕ್ಕೂ ಹೊಸಕ್ರಮಗಳನ್ನು ಮಾಡಲಿಕ್ಕೂ ವಿಶೇಷ ಸಂಗತಿಗಳಲ್ಲಿ ಆವುದಾದರೊಂದು ನಿಯಮಕ್ಕೆ ವ್ಯತಿರಿಕ್ತವಾಗಿ ನಡೆಯು ಲಿಕ್ಕೂ ಆಡಳಿತೆ ಕಮಿಟಿ ಸಭೆಗೆ ಅಧಿಕಾರವಿದೆ.

ಬಂಟರ ಯಾನೆ ನಾಡವರ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನಕ್ಕೆ ಪ್ರವೇಶದ ಬಗ್ಗೆ ಬರಕೊಳ್ಳತಕ್ಕ ಮನವಿ.

ವಿದ್ಯಾರ್ಥಿಯ ಹೆಸರು.

ಹುಟ್ಟಿದ ದಿನ. .....

ವಿದ್ಯಾಭ್ಯಾಸ ಮಾಡುತ್ತಿರುವ ಶಾಲೆ ಮತ್ತು ಕ್ಲಾಸು.

.....

ತಂದೆಯ ಅಥವಾ ರಕ್ಷಕನ ಹೆಸರು ಮತ್ತು ನಿವಾಸ

ದಕ್ಷಿಣ ಕನ್ನಡ ಜಿಲ್ಲಾ

ಬಂಟರ ಯಾನೆ ನಾಡವರ ಸಂಘದ

ನಿಬಂಧನೆಗಳು

(ಸಂ 1908ನೇ ಇಸವಿ ಜುಲ್ಯಾ ತಾ. 10ರಲ್ಲು
ಮಂಗಳೂರಿನಲ್ಲಿ ರಿಜಿಸ್ಟರ್ ಮಾಡಿಸಲ್ಪಟ್ಟಿದೆ.)

ಮಂಗಳೂರು.

1911.

ಮಂಗಳೂರು ಶಾರದಾ ಮುದ್ರಾಲಯದಲ್ಲಿ ಮುದ್ರಿತವಾಯಿತು.
1911.

1860ನೇ ಇಸವಿ ನಂಬ್ರ 21ನೆ ಆಕ್ಟಿನ 2ನೇ ಕಲಂ ಪ್ರಕಾರ

ಸಂಘೋದ್ದೇಶ ಸೂಚನೆ.

(ಮೆಮೊರೆಂಡಮ್ ಒಫ್ ಎಸ್ಸೋಸಿಯೇಶನ್.)

I. ಈ ಸಂಘವು ದಕ್ಷಿಣಕನ್ನಡದ "ಬಂಟರ ಯಾನೆ ನಾಡವರ ಸಂಘ"ವೆಂದು ಕರೆಯಲ್ಪಡುವುದು.

II. ಈ ಸಂಘದ ಉದ್ದೇಶಗಳು.

1. ಪ್ರಧಾನ ಉದ್ದೇಶಗಳು.:—

(*a*) ಬಂಟರ ಯಾನೆ ನಾಡವರ ಜಾತಿಯ ವಿದ್ಯಾರ್ಥಿಗಳಿಗೆ ಮಂಗಳೂರಲ್ಲಿ ಒಂದು ವಿದ್ಯಾರ್ಥಿಭವನವನ್ನು ಸ್ಥಾಪಿಸಿ ಅದನ್ನು ನಡೆಯಿಸುವುದು.

(*b*) ದ್ರವ್ಯಾನುಕೂಲತೆಯಾದರೆ ಸದರಿ ಜಾತಿಯ ವಿದ್ಯಾರ್ಥಿಗಳಿಗೆ ಉಳಿದ ಪ್ರಮುಖ ಸ್ಥಳಗಳಲ್ಲಿ ಯಾವಲ್ಲಿ ಯಾವ ಕಾಲದಲ್ಲಿ ಅವಶ್ಯವೆಂದು ತೋರುತ್ತದೋ ಆಗ ಉಪ ವಿದ್ಯಾರ್ಥಿ ಭವನಗಳನ್ನು ಸ್ಥಾಪಿಸುವುದು.

(*c*) ಆ ಜಾತಿಯ ಗೃಹಸ್ಥರ ಉಪಯೋಗಕ್ಕೆ ಮಂಗಳೂರಲ್ಲಿ ಒಂದು ಪುಸ್ತಕಭಂಡಾರವನ್ನಾಗಲಿ ಓದುಮನೆಯನ್ನಾಗಲೀ ಅಥವಾ ಈ ಎರಡನ್ನೂ ಸ್ಥಾಪಿಸಿ ಪೋಷಿಸುವುದು ಮತ್ತು ಸಂಘದ ಉದ್ದೇಶಗಳಿಗೆ ಅವಶ್ಯ ಬೀಳುವ ಇತರ ಕಟ್ಟೋಣ ಅಥವಾ ಕಟ್ಟೋಣಗಳನ್ನು ಕಟ್ಟಿಸುವುದು.

2. ಔಪಸರ್ಗಿಕ ಉದ್ದೇಶಗಳು.

(*a*) ಸದರಿ ಜಾತಿಯವರಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವೂ ಉನ್ನತ ವಿದ್ಯಾಭ್ಯಾಸವೂ ವೃದ್ಧಿಯಾಗುವಂತೆ ಮಾಡುವುದು.

(*b*) ಸದರಿ ಜಾತಿಯವರಲ್ಲಿ ಯೋಗ್ಯರೂ ನಿಪುಣರೂ ಆದ ವಿದ್ಯಾರ್ಥಿಗಳು ಸ್ವದೇಶದಲ್ಲಾಗಲಿ ವಿದೇಶದಲ್ಲಾಗಲಿ ವಿದ್ಯಾಭ್ಯಾಸವನ್ನು ಮುಂದು

ರಿಸಲಿಕ್ಕೆ ವಿದ್ಯಾರ್ಥಿವೇತನಗಳನ್ನಾಗಲಿ ಉಪಾಯನಗಳನ್ನಾಗಲೀ ಪುಸ್ತಿಗೆ ಸಾಲಗಳನ್ನಾಗಲೀ ಸಂಘದ ಭಂಡಾರದಿಂದ ಆಯಾ ಸಂದರ್ಭಾನುಸಾರವಾಗಿ ಅಗತ್ಯ ತೋರುವ ಶರ್ತಗಳಿಗೆ ಒಳಪಡಿಸಿ ಕೊಟ್ಟು ಸಹಾಯ ಮಾಡುವುದು.

(c) ಧರ್ಮ, ಸಾಹಿತ್ಯ, ವಿಜ್ಞಾನಶಾಸ್ತ್ರ, ಕಲಾ, ವಾಣಿಜ್ಯ, ಕೃಷಿ ಇವುಗಳ ಜ್ಞಾನವನ್ನು ಸದರಿ ಜಾತಿಯ ಜನರಲ್ಲೆಲ್ಲಾ ಹಬ್ಬಿಸಿ ಆ ವೃತ್ತಿಗಳನ್ನು ಅನುಸರಿಸುವಲ್ಲಿ ಉತ್ತೇಜನ ಕೊಡುವುದು. ಪ್ರಧಾನವಾಗಿ ಯೋಗ್ಯರೆಂದು ಕಂಡುಬರುವ ವಿದ್ಯಾರ್ಥಿಗಳನ್ನು ಕೃಷಿಕರ್ಮ ವಿದ್ಯೆಯಲ್ಲಿ ಸುಶಿಕ್ಷಿತರನ್ನಾಗಿ ಮಾಡಿ ಅಂತಹವರನ್ನು ಜಿಲ್ಲೆಯ ರೈತರಿಗೆಲ್ಲಾ ತಮ್ಮ ಜ್ಞಾನೋಪದೇಶವನ್ನು ಮಾಡುವುದಕ್ಕೋಸ್ಕರ ಕಳುಹುವುದು.

(d) ಸದರಿ ಜಾತಿಯವರಲ್ಲಿ ಕೃಷಿಸಂಘ, ಕೃಷೀವಲಧನಾಗಾರ ಸಹಕಾರಿಸಮಾಜ, ವಾಣಿಜ್ಯಸಂಘ, ಕೈಗಾರಿಕೆಯ ಕೂಟ ಇವೇ ಮೊದಲಾದ ಸಮಾಜಗಳನ್ನು ಸ್ಥಾಪಿಸುವಂತೆ ಉಪದೇಶಿಸಿ ಆ ವಿಷಯ ಸಹಾಯ ಮಾಡಿ ಲೌಕಿಕ ಸುಖ ಸಂಪತ್ತುಗಳ ಅಭಿವೃದ್ಧಿಯನ್ನೂ ಸಾಹಸಿಕೋದ್ಯೋಗಗಳಲ್ಲಿ ಮನಃಪ್ರವೃತ್ತಿಯನ್ನೂ ಉಂಟುಮಾಡುವುದು.

III. ಸದ್ಯ ಈ ಸಂಘದ ಕಾರ್ಯನಿರ್ವಾಹವನ್ನು ಈ ಕೆಳಗಿನವರ ವಶ ಕೊಟ್ಟಿದೆ.

ಅಧ್ಯಕ್ಷ.

ಮ| ರಾ| ಅ. ದೇವಪ್ಪ ಪೂಂಜರು ಬಿ. ಎ., ಬಿ. ಎಲ್. ಉಡಿಪಿ ತಾಲೂಕು ತಹಶಿಲ್‌ದಾರ್.

ಉಪಾಧ್ಯಕ್ಷ.

,, ಕೃಷ್ಣಯ್ಯ ಸೆಲಾಯರು ತಾಲೂಕು ಬೋರ್ಡು ಮೆಂಬರರು, ಬೆಂಚ್ ಮೆಜಿಸ್ಟ್ರೇಟ್, ಕೊಡಿಯಾಲಗುತ್ತು, ಮಂಗಳೂರು.

ಕಾರ್ಯದರ್ಶಿ

,, ಬಿ. ಮಹಾಬಲ ಹೆಗ್ಗಡೇರು ಬಿ. ಎ. ಬಿ. ಎಲ್. ಪ್ಲೀಡರ್, ಮಂಗಳೂರು

ಕೋಶಾಧಿಕಾರಿ.

,, ಅ. ಬಾಲಕೃಷ್ಣ ಶೆಟ್ರು ಜಮಿನ್‌ದಾರ, ಅತ್ತಾವರ, ಮಂಗಳೂರು.

ಮ| ರಾ| ರಾಮ ರೈಗಳು. ಜಮಿನುದಾರ, ಬೆಳ್ಳಿಪಾಡಿ, ಉಪ್ಪಿನಂ
ಗಡಿ ತಾಲೂಕು.

2. ,, ಗುಡ್ಡಪ್ಪ ರೈಗಳು. ಪ್ಲೀಡರ್, ಮಡಕೇರಿ, ಕೊಡಗು ಜಿಲ್ಲಾ.

3. ,, ಕೋಟ್ಯಾಂಣಾಳ್ವರು. ಜಮಿನುದಾರ, ಇಚ್ಲಂಪಾಡಿ, ಕಾಸರ
ಗೋಡು ತಾಲೂಕು.

4. ,, ಚಿಕ್ಕಪ್ಪ ನಾಯ್ಕರು. ,, ಬಂಬ್ರಾಣ,
ಕಾಸರಗೋಡು ತಾಲೂಕು.

5. ,, ಶಂಕರಾಳ್ವರು. ,, ಕೊಡಿಂಗಾರು,
ಕಾಸರಗೋಡು ತಾಲೂಕು.

6. ,, ದೂಮ ರೈಗಳು ,, ಬಡಿಲ,
ಮಂಗಳೂರು ತಾಲೂಕು.

7. ,, ಸುಬ್ಬಯ್ಯ ಸೆಟ್ರು. ,, ಮಿಜಾರ ಮರಕಡಗುತ್ತು,
ಮಂಗಳೂರು ತಾಲೂಕು.

8. ,, ಅಪ್ಪಯ್ಯ ಸೆಟ್ರು. ,, ,, ,,
ಮಂಗಳೂರು ತಾಲೂಕು.

9. ,, ಸುಬ್ಬಯ್ಯ ಸೆಟ್ರು ,, ಬೊಮ್ಮಾರಬೆಟ್ಟು, ಕೊಲಿ
ಯಾರು, ಉಡಿಪಿ ತಾಲೂಕು.

10. ,, ರಾಮಯ್ಯ ಹೆಗ್ಗಡೇರು. ,, ಬಡಗಬೆಟ್ಟು, ಉಡಿಪಿ ತಾ
ಲೂಕು.

11. ,, ಮಹಬಲೇಶ್ವರ ಸೆಟ್ರು ,, ಹಂದಾಡಿ ತೆಂಕ ಮನೆ,
ಉಡಿಪಿ ತಾಲೂಕು.

12. ,, ಅಣ್ಣಪ್ಪ ಸೆಟ್ರು. ,, ಬೈಂದೂರು, ಎಡ್ತರೆ, ಕುಂ
ದಾಪುರ ತಾಲೂಕು.

13. ,, ಸುಬ್ಬಯ್ಯ ಸೆಟ್ರು. ,, ಬಸ್ರೂರು, ಕುಂದಾಪುರ
ತಾಲೂಕು.

14. ,, ಮಂಜಪ್ಪ ಭಂಡಾರಿಗಳು' ಸೆಬ್ ರಿಜಿಸ್ಟ್ರಾರ್, ವಿಟ್ಲ, ಉಪ್ಪಿ
ನಂಗಡಿ ತಾಲೂಕು.

15. ಮ| ರಾ| ತಿಮ್ಮಪ್ಪ ಪೂಂಜರು ಬಿ. ಎ. ಕ್ಲಾರ್ಕ್, ಹಜೂರು ಆಫೀಸು ಮಂಗಳೂರು.

16. ,, ರಾಮಯ್ಯ ಹೆಗ್ಗಡೇಯರು, ಜಮೀನುದಾರ, ಕೊಡಿಯಾಲ ಗುತ್ತು, ಮಂಗಳೂರು.

17. ,, ಮಂಜಯ್ಯ ಸೆಟ್ಟ್ರು ,, ಆಮುಣಜೆ, ಮಂಗಳೂರು ತಾಲೂಕು.

18. ,, ಶಾಮ ಸೆಟ್ಟ್ರು ಬಿ. ಎ. ,, ಕುಂಜೂರು, ಉಡ್ಪಿ ತಾಲೂಕು.

19. ,, ವೆಂಕಪ್ಪ ಸೆಟ್ಟ್ರು. ಕಾರ್ಯದರ್ಶಿ, ಬಂಟರ ವಿದ್ಯಾರ್ಥಿ ಸಂಘ.

ಈ ಕೆಳಗೆ ದಸ್ಕತು ಮಾಡಿದ ನಾವು ಉಕ್ತ ನಿಬಂಧನೆಗಳಿಗೆ ಅನುಸಾರವಾಗಿ "ಬಂಟರ ಯಾನೆ ನಾಡವರ ಸಂಘ"ವೆಂಬ ಹೆಸರಿನಿಂದ ಸಮಾಜವಾಗಿ ಕೂಡಿರುತ್ತೇವೆ.

ದಸ್ಕತು. ಅ. ದೇವಪ್ಪ ಪೂಂಜ.

,, ಕೆ. ಬಿ. ತಿಮ್ಮಪ್ಪ ಶೆಟ್ಟಿ.

,, ಬಿ. ಮಹಾಬಲ ಹೆಗ್ಗಡೆ.

,, ಅ. ಬಾಲಕೃಷ್ಣ ಶೆಟ್ಟಿ.

,, ಕೆ. ಶಾಮ ಶೆಟ್ಟಿ.

,, ದೆಮ್ಮಲೆ ದೇವು ಶೆಟ್ಟಿ.

,, ಪೇರೂರು ಕೆಂಞಣ್ಣಾಳ್ವ.

,, ಪಟೇಲ್ ಶಂಕರಾಳ್ವ, ಕೊಡಿಂಗಾರ್.

,, ಕೆ. ರಾಮಯ ಹೆಗ್ಗಡೆ.

ದಕ್ಷಿಣ ಕನ್ನಡ ಬಂಟರ ಯಾನೆ ನಾಡವರ ಸಂಘದ ನಿಬಂಧನೆಗಳು.

1. ಈ ಸಂಘವು (1) ಸ್ಥಾಪಕರು (2) ಸಹಾಯಕರು (3) ಸಭ್ಯರು ಎಂಬ ಮೂರು ತರಗತಿಯ ಮೆಂಬರರಿಂದ ಕೂಡಿರುವುದು.

(a) ಸಂಘಕ್ಕೆ ಐನೂರು ರೂಪ್ಯಾ ಅಥವಾ ಅದಕ್ಕಿಂತ ಮಿಕ್ಕಿ ಸಹಾಯಧನ ಕೊಡುವವರು ಸ್ಥಾಪಕರು.

(b) ನೂರರಿಂದ ಐನೂರು ರೂಪ್ಯಾಯೊಳಗಿನ ಸಹಾಯಧನ ಕೂಡುವವರು ಸಹಾಯಕರು.

(c) ಇಪ್ಪತ್ತೈದರಿಂದ ನೂರು ರೂಪ್ಯಾಯೊಳಗಿನ ಧನಸಹಾಯ ಮಾಡುವವರು ಸಭ್ಯರು.

2. ಚಂದಾಹಣ ಪೂರಾ ವಸೂಲು ಕೊಟ್ಟ ವಿನಹಾ ಚಂದಾದಾರನು ಮೆಂಬರಿ ಹಕ್ಕಿಗೆ ಅರ್ಹನಾಗುವದಿಲ್ಲ. ಆದರೆ ಒಬ್ಬ ಚಂದಾದಾರನು ಅವನ ಚಂದಾಹಣದ ಒಂದಂಶವನ್ನು ಮಾತ್ರ ವಸೂಲು ಕೊಟ್ಟಿದ್ದ ಪಕ್ಷಕ್ಕೆ ಉಳಿದ ಹಣವನ್ನು ಕೊಡುವವರೆಗೆ ವಸೂಲು ಕೊಟ್ಟ ಹಣವು ಯಾವ ತರಗತಿಗೆ ಸಮಾನವಾಗುತ್ತದೊ ಆ ತರಗತಿಯ ಮೆಂಬರನಾಗಿ ಎಣಿಸಲ್ಪಡುವನು.

3. ಕೀಳು ತರಗತಿಯ ಒಬ್ಬ ಚಂದಾದಾರನು ಮೇಲು ತರಗತಿಯ ಮೆಂಬರನಾಗಲಿಕ್ಕೆ ಅಪೇಕ್ಷಿಸಿ ಆದಕ್ಕೆ ಬೇಕಾದ ಐವಜು ಭರ್ತಿ ಮಾಡಿ ಕೊಟ್ಟಲ್ಲಿ ಆ ಮೇಲುತರಗತಿಯ ಮೆಂಬರನಾಗಬಹುದು.

4. ಸ್ಥಾಪಕರಿಗೂ ಸಹಾಯಕರಿಗೂ ಸಭ್ಯರಿಗಿರುವ ಹಕ್ಕು ವ ಅಧಿಕಾರಗಳಲ್ಲದೆ ಈ ಕೆಳಗಿನ ಹೆಚ್ಚಿನ ಅಧಿಕಾರಗಳಿರುವವು.

(a) ಸಾವಿರ ರೂಪ್ಯಾ ಅಥವಾ ಅದಕ್ಕಿಂತ ಹೆಚ್ಚು ಹಣ ಕೊಡುವ ಒಬ್ಬ ಸ್ಥಾಪಕನ ಹೆಸರನ್ನು ಕೊಟ್ಟ ಮೊಬಲಗಿನ ಸಂಖ್ಯೆ ಸಮೇತ ಒಂದು ಪ್ರತ್ಯೇಕ ಶ್ವೇತ ಶಿಲೆಯಲ್ಲಿ ಕೆತ್ತಿಸಿ ಸಂಘದ ಉದ್ದೇಶವನ್ನನುಸರಿಸಿ ಮಂಗಳೂರಲ್ಲಿ ಕಟ್ಟುವ ವಿದ್ಯಾರ್ಥಿಭವನದಲ್ಲೊಂದು ಪ್ರಮುಖ ಸ್ಥಳದಲ್ಲಿ ಇಡೋಣಾದೀತು. ಇತರ ಸ್ಥಾಪಕರ ಹೆಸರುಗಳನ್ನು ಅವರು ಕೊಡುವ ಮೊಬಲಗಿನ ಸಂಖ್ಯೆಗಳ ಸಮೇತ ಆ ಸಂಖ್ಯೆಗಳನ್ನನುಸರಿಸಿ ಶ್ವೇತಶಿಲೆಯಲ್ಲಿ ಒಂದರ

ಕೆಳಗೊಂದು ಕೆತ್ತಿ ಅದೇ ಪ್ರಕಾರ ಇಡೋಣಾದೀತು. ಸಹಾಯಕರುಗಳನ್ನು ಅವರು ಕೊಡುವ ಮೊಬಲಗಿನ ಸಂಖ್ಯೆ ಸಮೇತ ಲೋಹದ ತಗಡುಗಳಲ್ಲಿ ಕೆತ್ತಿಸಿ ಅದೇ ರೀತಿಯಲ್ಲಿ ಇಡೋಣಾದೀತು.

(b) ಪ್ರತಿಯೊಬ್ಬ ಸ್ಥಾಪಕನಿಗೆ ಸಂಘದ ಸಭೆಯಲ್ಲಾಗಲಿ ಅದರ ಕಾರ್ಯನಿರ್ವಾಹಕ ಸಭೆಯಲ್ಲಾಗಲಿ ಎರಡು ವೋಟುಗಳು, ಪ್ರತಿಯೊಬ್ಬ ಸಹಾಯಕನಿಗಾಗಲಿ ಸಭ್ಯನಿಗಾಗಲಿ ಒಂದು ವೋಟು ಮಾತ್ರ.

(c) ಎಲ್ಲಾ ತರಗತಿಯ ಮೆಂಬರರು ತಮ್ಮ ಜೀವಾಂತ್ಯದ ವರೇಗೆ ಮೆಂಬರರಾಗಿರುವುದು. ಸ್ಥಾಪಕರ ಮಟ್ಟಿಗೆ ಅವರ ಜೀವಾಂತ್ಯದ ಮೇಲೆ ಅವರಿಂದ ನೇಮಕವಾದವರು, ನೇಮಕವಾದವರಿಲ್ಲದ್ದಲ್ಲಿ ಅವರ ಕುಟುಂಬದವರಿಂದ ಆರಿಸಲ್ಪಟ್ಟವರು ಆ ತರಗತಿಯ ಮೆಂಬರರಾಗುವರು. ಇದೇ ಮೇರೆಗೆ ಪಾರಂಪರ್ಯ ನಡೆಯತಕ್ಕದ್ದು. ಆದರೆ ಯಾವನೊಬ್ಬ ಮೆಂಬರನು ಸಂಘಕ್ಕೆ ಅಹಿತವಾಗಿ ನಡಿಯುತ್ತಾನೆಂದು ಕಾರ್ಯನಿರ್ವಾಹಕ ಸಂಘದವರಿಗೆ ಮಂದಟ್ಟಾದರೆ ಅಂತಹವನನ್ನು ಅವರು ಅಮಾನತು ಇಟ್ಟು ಮಹಾಸಭೆಯವರ ಇತ್ಯರ್ಥಕ್ಕೆ ಒಪ್ಪಿಸತಕ್ಕದ್ದು.

5. ಎಲ್ಲಾ ಮೆಂಬರರು ಸಭೆಯಲ್ಲಿ ವೋಟು ಕೊಡುವುದಕ್ಕೆ ಸ್ವತಹಾ ಬಂದಿರಬೇಕು. ಆದರೆ ಸ್ತ್ರೀ ಮೆಂಬರರು, ಮಂಗಳೂರು ಬಿಟ್ಟು ಬೇರೆ ಕಡೆಗಳಲ್ಲಿ ಸರಕಾರಿ ಉದ್ಯೋಗಗಳಲ್ಲಿರುವವರು ಮತ್ತು ಬೇರೆ ಜಿಲ್ಲೆಗಳಲ್ಲಿರುವವರು ತಮ್ಮ ಪ್ರತಿನಿಧಿಗಳ ಮುಖಾಂತರವಾಗಿ ವೋಟು ಕೊಡಬಹುದು. ಇತರ ಮೆಂಬರರು ಸಭೆಗೆ ಬರುವರೆ ಸಾಧ್ಯವಿಲ್ಲದಿದ್ದರೆ ತಮ್ಮ ಪ್ರಾಯ ಭರಿತರಾದ ಗಂಡು ಮಕ್ಕಳನ್ನು ಅಥವಾ ವಾರಿಸ್‌ದಾರರನ್ನು ಪ್ರತಿನಿಧಿಗಳನ್ನಾಗಿ ಮಾಡಿ ಅವರ ಮುಖಾಂತರ ವೋಟು ಕೊಡಬಹುದು. ಹಾಗೆ ಮಾಡುವ ಮೆಂಬರನು ಅಥವಾ ಮೆಂಬರಳು ತನ್ನ ಪ್ರತಿನಿಧಿಯ ಹೆಸರನ್ನು ಸಂಘದ ಕಾರ್ಯದರ್ಶಿಗೆ ಬರಹಮೂಲಕ ತಿಳಿಸತಕ್ಕದ್ದು

6. ಸಂಘದ ವಿದ್ಯಾರ್ಥಿಭವನ ಮತ್ತು ಇತರ ಸ್ಥಾಪನೆಗಳ ಆಡಳಿತೆಯೂ ಸಂಘದ ಉದ್ದೇಶಗಳನ್ನೂ ಅವುಗಳಿಗೆ ಸಂಬಂಧಪಡುವ ಎಲ್ಲಾ ವಿಷಯಗಳನ್ನೂ ನಿರ್ವಹಿಸುವ ಅಧಿಕಾರವೂ ಒಂದು ಕಾರ್ಯನಿರ್ವಾಹಕ ಸಭೆಯ

ನವಾಗಿರತಕ್ಕದ್ದು. ಈ ಕಾರ್ಯನಿರ್ವಾಹಕ ಸಭೆಯು ಮೆಂಬರರೊಳಗಿಂದ ಆರಿಸಲ್ಪಟ್ಟ ಅಧ್ಯಕ್ಷ (ಪ್ರೆಸಿಡೆಂಟ್) ಉಪಾಧ್ಯಕ್ಷ (ವೈಸ್ ಪ್ರೆಸಿಡೆಂಟ್) ಕಾರ್ಯದರ್ಶಿ (ಸೆಕ್ರೆಟರಿ) ಕೋಶಾಧಿಕಾರಿ (ಟ್ರೆಜರರ್) ಎಂಬೀ ಅಧಿಕಾರಿಗಳಿಂದಲೂ ಸಂಘದ ಎಲ್ಲಾ ಸ್ಥಾಪಕರಿಂದಲೂ ಸಹಾಯಕರ ಮತ್ತು ಸಭ್ಯರ ಪೈಕಿ ಮಹಾ ಸಭೆಯಲ್ಲಿ ಯಾರು ಆರಿಸಲ್ಪಡುತ್ತಾರೋ ಅಂತಹವರಿಂದಲೂ ನಮ್ಮ ಜಾತಿಯ ಮಂಗಳೂರಲ್ಲಿರುವ ವಿದ್ಯಾರ್ಥಿ ಸಂಘದವರಿಂದ ಆರಿಸಲ್ಪಟ್ಟ ಒಬ್ಬ ಪ್ರತಿನಿಧಿಯಿಂದಲೂ ಮತ್ತು ವಿದ್ಯಾರ್ಥಿಭವನದ ಸುಪರಿಂಟೆಂಡೆಂಟರಿಂದಲೂ ಕೂಡಿರತಕ್ಕದ್ದು.

7. ವಾರ್ಷಿಕ ಮಹಾಸಭೆಯು ಕ್ರಿಸ್‌ಮಸ್ ಹಬ್ಬದ ರಜೆಯ ಸಮಯದಲ್ಲಿ ಅನುಕೂಲ ಆದ ದಿವಸ ನಿಶ್ಚೈಸಿ ಕೂಡತಕ್ಕದ್ದು. ಈ ಬಗ್ಗೆ ಎರಡು ವಾರಗಳ ಮುಂದಾಗಿ ಕಾರ್ಯದರ್ಶಿಯು ನೋಟೀಸು ಕಳುಹಿಸತಕ್ಕದ್ದು. ಆ ದಿನಕ್ಕೆ ಸಭೆ ಸೇರುವದು ಅನಾನುಕೂಲವೆಂದು ಕಾರ್ಯನಿರ್ವಾಹಕ ಸಭೆಯವರಿಗೆ ಕಂಡುಬಂದರೆ ಅನುಕೂಲವಾದ ಬೇರೊಂದು ದಿನ ನಿಶ್ಚೈಸಿ ಅದೇ ಪ್ರಕಾರ ನೋಟೀಸು ಕೊಡತಕ್ಕದ್ದು. ಈ ಸಭೆಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ಕೋಶಾಧಿಕಾರಿ ಮತ್ತು ಕಾರ್ಯನಿರ್ವಾಹಕ ಸಂಘದ ಇತರ ಮೆಂಬರರು ಆರಿಸಲ್ಪಡತಕ್ಕದ್ದು. ಕಾರ್ಯನಿರ್ವಾಹಕ ಸಭೆಯಲ್ಲಿ ಅಧಿಕಾರಿಗಳು, ಸ್ಥಾಪಕರು, ಮಂಗಳೂರಲ್ಲಿರುವ ವಿದ್ಯಾರ್ಥಿಭವನದ ಸುಪರಿಂಟೆಂಡೆಂಟರು ಮತ್ತು ವಿದ್ಯಾರ್ಥಿ ಸಂಘದ ಪ್ರತಿನಿಧಿ ಇವರ ಹೊರತು ಉಳಿದ ಮೆಂಬರರ ಸಂಖ್ಯೆಯು ಐದಕ್ಕೆ ಮೀರಿರ ಕೂಡದು. ಹೀಗೆ ಪ್ರತಿಷ್ಠಿತವಾದ ಕಾರ್ಯನಿರ್ವಾಹಕ ಸಂಘವು ಒಂದು ವರುಷದ ವರೇಗೆ ಅಥವಾ ಮಹಾ ಸಭೆಯಲ್ಲಿ ಎರಡನೆ ನಿರೂಪಿತವಾಗುವ ವರೇಗೆ ಸಂಘದ ಕಾರ್ಯಗಳನ್ನು ನಿರ್ವಹಿಸತಕ್ಕದ್ದು. ಕಾರ್ಯನಿರ್ವಾಹಕ ಸಂಘದಲ್ಲಿ ಒಮ್ಮೆ ನಿಯುಕ್ತರಾದ ಅಧಿಕಾರಿಗಳೂ ಮೆಂಬರರೂ ಪುನರ್ನಿಯುಕ್ತರಾಗ ಬಹುದು.

8. ವಾರ್ಷಿಕ ಮಹಾ ಸಭೆಯಲ್ಲಿ ಕಾರ್ಯನಿರ್ವಾಹಕ ಸಂಘವು ಆದಾಯ ವೆಚ್ಚ ಮತ್ತು ಜಾತಾ ಬಾಕಿಗಳನ್ನು ತೋರಿಸುವ ಲೆಖ್ಖಪತ್ರವನ್ನೂ ಸಂಘದ ಆಡಳ್ತೆಯ ಸವಿಸ್ತರ ವರದಿಯನ್ನೂ (ಡಿಟೈಲ್ಡ್ ರಿಪೋರ್ಟು) ಮಹಾ

ಸಭೆಯ ಮುಂದಿಡತಕ್ಕದ್ದು. ಕಾರ್ಯನಿರ್ವಾಹಕ ಸಂಘದಿಂದ ನೆ
ಲ್ಪಟ್ಟ ಪರಿಶೋಧಕನು, ಕೋಶಾಧಿಕಾರಿಯು ಇಟ್ಟ ಲೆಖ್ಖಪತ್ರಗಳನ್ನು
ಸಭೆಯ ಮುಂದಿಡುವ ಮೊದಲೇ ಚೆನ್ನಾಗಿ ಪರೀಕ್ಷಿಸಿ ಅವು ಸರಿಯಾಗಿ
ವೆಯೋ ಏನೆಂಬದರ ವಿಷಯ ಧೃಢೀಕರಿಸತಕ್ಕದ್ದು.

9. ವಿಶೇಷವಾದ ಎಲ್ಲಾ ವಿಷಯಗಳನ್ನು ಮಹಾ ಸಭೆಯಲ್ಲಿ ವಿತ
ರ್ಕಿಸಿ ಸಂಘವು ನಿರ್ಣಯಿಸತಕ್ಕದ್ದು. ಅಂತಹ ನಿರ್ಣಯಗಳನ್ನನುಸರಿಸಿ
ಕಾರ್ಯನಿರ್ವಾಹಕ ಸಂಘವು ಪ್ರವರ್ತಿಸತಕ್ಕದ್ದು. ಉಳಿದ ವಿಷಯಗಳೆಲ್ಲಾ
ಕಾರ್ಯನಿರ್ವಾಹಕ ಸಂಘದ ಸ್ವಾಧೀನವಾಗಿದ್ದು ವಿಮರ್ಷಾಪೂರ್ವಕ ನಡೆ
ಯತಕ್ಕದ್ದು.

10. ಕಾರ್ಯನಿರ್ವಾಹಕ ಸಭೆಯವರು ಸಂಘದ ಸ್ಥಾಪನೆಗಳ
ಅಥವಾ ಕಾರ್ಯಗಳ ಆಡಳತೆ ಸಂಬಂಧವಾದ ಯಾವದಾದರೊಂದು ಅಸಾ
ಧಾರಣ ವಿಷಯದಲ್ಲಿ ಮಹಾ ಸಭೆಯವರ ಅಭಿಪ್ರಾಯವನ್ನು ತಿಳಿಯಲಪೇ
ಕ್ಷಿಸಿದರೆ ಒಂದು ನೈಮಿತ್ತಿಕ ಮಹಾ ಸಭೆಯನ್ನು ಕೂಡಿಸಿ ಆ ಸಭೆಯ ನಿರ್ಣ
ಯಕ್ಕನುಸರಿಸಿ ಪ್ರವರ್ತಿಸತಕ್ಕದ್ದು.

11. ಕಾರ್ಯನಿರ್ವಾಹಕ ಸಂಘದ ಐದು ಮಂದಿ ಮೆಂಬರರಾಗಲಿ
ಸಂಘದ ಇತರ ಹತ್ತು ಮಂದಿ ಮೆಂಬರರಾಗಲಿ ಒಂದು ನೈಮಿತ್ತಿಕ ಮಹಾ
ಸಭೆಯನ್ನು ಕೂಡಿಸುವದು ಅವಶ್ಯವೆಂದು ಕಂಡಾಗ ಅವರು ಆ ವಿಷಯ
ಬರಹಮೂಲಕ ಕಾರ್ಯದರ್ಶಿಗೆ ತಿಳಿಸತಕ್ಕದ್ದು ಕಾರ್ಯದರ್ಶಿಯು
ಮೂಲಕ ಮೆಂಬರರಿಗೆ ತಿಳಿಸಿ ಸಭೆಯನ್ನು ಕೂಡಿಸತಕ್ಕದ್ದು. ಇಂತಹ ನಿರೂ
ಪವನ್ನು ಎಲ್ಲಾ ಮೆಂಬರರಿಗೂ ಅನುಕೂಲ ಕಂಡ ಹಾಗೆ ಆಳಿನ ಮುಖಾಂತ
ರವಾಗಲಿ ಅಂಚೆಯ ಮೂಲಕವಾಗಲಿ ಕಳುಹಿಸತಕ್ಕದ್ದು. ಸಭೆ ಕೂಡುವ
ದಕ್ಕೆ ನಿಶ್ಚಯಿಸಿದ ದಿನಕ್ಕಿಂತ ಎರಡು ವಾರಗಳ ಮುಂದಾಗಿ ನಿರೂಪವನ್ನು
ಮೆಂಬರರಿಗೆ ತಿಳಿಸತಕ್ಕದ್ದು.

12. ವಾರ್ಷಿಕ ಸಭೆಯಲ್ಲಾಗಲಿ ನೈಮಿತ್ತಿಕ ಸಭೆಯಲ್ಲಾಗಲಿ ಅಧ್ಯ
ಕ್ಷರನ್ನು ಆ ಸಭೆಯಲ್ಲೇ ಆರಿಸತಕ್ಕದ್ದು. ಆವುದಾದರೊಂದು ವಿಷಯದಲ್ಲಿ
ಭಿನ್ನಾಭಿಪ್ರಾಯಗಳಿರುವಲ್ಲಿ ಮೆಂಬರರ ವೋಟು ತೆಗೆದು ಬಹುಪಕ್ಷದ

ವ್ಯ ಗಳು ಸಂಘದ ಸಮ್ಮತಿ ಎಂದೆಣಿಸಿ ಅದಕ್ಕನುಸಾರವಾಗಿ ಪ್ರವರ್ತಿಸ ತಕ್ಕದ್ದು. ವೋಟುಗಳು ಉಭಯತ್ರ ಸಮಸಂಖ್ಯೆಯಾದರೆ ಅಧ್ಯಕ್ಷನಿಗೆ ತೀರ್ಮಾನದ ವೋಟು ಇರತಕ್ಕದ್ದು. ಇಪ್ಪತ್ತೊಂದು ಮೆಂಬರರು ಸೇರದೆ ಮಹಾ ಸಭೆಯಾಗ ಕೂಡದು. ಏಳು ಮಂದಿ ಮೆಂಬರರು ಸೇರದೆ ಕಾರ್ಯ ನಿರ್ವಾಹಕ ಸಂಘದ ಸಭೆಯಾಗಕೂಡದು.

13. ಕಾರ್ಯನಿರ್ವಾಹಕ ಸಂಘದವರು ಅವಶ್ಯವೆಂದು ಕಂಡಷ್ಟು ಸಾರಿ ಸಭೆ ಸೇರಬಹುದು. ಈ ಸಂಘದ ಸಭೆಯಲ್ಲಿ ಅಧ್ಯಕ್ಷರೆ ಅಗ್ರಸ್ಥ ಅಥವಾ ಸಭಾಪತಿಯಾಗಿರತಕ್ಕದ್ದು. ಅಧ್ಯಕ್ಷರಾಗಲಿ ಉಪಾಧ್ಯಕ್ಷರಾಗಲಿ ಇಲ್ಲದ ಸಂದರ್ಭದಲ್ಲಿ ಸಭೆ ಕೂಡುವದು ಅವಶ್ಯವಾದಲೆ ಉಳಿದ ಮೆಂಬರರು ಸೇರಿ ತಮ್ಮಲ್ಲೊಬ್ಬನನ್ನು ತಾತ್ಕಾಲಿಕ ಸಭಾಪತಿಯಾಗಿ ನೇಮಿಸಿಕೊಳ್ಳ ಬಹುದು. ವೋಟಿನ ವಿಷಯದಲ್ಲಿ ಮಹಾಸಭೆಯಲ್ಲಿ ಅನುಸರಿಸುವ ಕ್ರಮ ಗಳನ್ನೇ ಕಾರ್ಯನಿರ್ವಾಹಕ ಸಭೆಯಲ್ಲಿಯೂ ಅನುಸರಿಸತಕ್ಕದ್ದು.

14. ಕಾರ್ಯನಿರ್ವಾಹಕ ಸಂಘದವರು ಸಂಘದ ಕಾರ್ಯವ್ಯವ ಸ್ಥೆಯು ಅತ್ಯಂತ ಅನುಕೂಲವಾಗಿ ನಡಿಯುವಂತೆ ಇಂತಹ ಕಾರ್ಯಭಾಗ ವನ್ನು ಇಂತಹವನು ನೆರವೇರಿಸಬೇಕೆಂದು ಕೆಲಸಗಳನ್ನು ತಮ್ಮೊಳಗೆ ಹಂಚಿ ಕೊಳ್ಳಬಹುದು ಅಥವಾ ಒಂದು ಯಾ ಹೆಚ್ಚು ಕೆಲಸಗಳನ್ನು ಸುದಾರಿಸುವು ದಕ್ಕಾಗಿ ತಮ್ಮಲ್ಲಿ ಒಬ್ಬನನ್ನಾಗಲಿ ಎರಡು ಯಾ ಹೆಚ್ಚು ಮಂದಿ ಕೂಡಿರುವ ಉಪಸಭೆಯನ್ನಾಗಲಿ ಸಭೆಗಳನ್ನಾಗಲಿ ನಿಯಮಿಸಿಕೊಳ್ಳಬಹುದು. ಆದರೆ ಇಂತಹ ವಿಲೆವಾರಿಯನ್ನು ಮಾಡುವ ಮೊದಲೆ ಆ ವಿಷಯ ಪ್ರಥಮತಃ ತಮ್ಮ ಸಭೆಯಲ್ಲಿ ಬರಹಮೂಲಕ ನಿರ್ಣಯಗಳನ್ನು ಮಾಡಿಕೊಂಡಿರಬೇಕು. ಆ ರೀತಿ ನಿಯುಕ್ತನಾದ ಮೆಂಬರನಾಗಲಿ ಅಥವಾ ಉಪಸಭೆ ಯಾ ಸಭೆಯವರಾ ಗಲಿ ತನ್ನ ಅಥವಾ ತಮ್ಮ ಮುಖಾಂತರ ಜಮಾಬಂದ ಅಥವಾ ಖರ್ಚಾದ ಹಣದ ಸರಿಯಾದ ಲೆಖ್ಖವನ್ನಿಟ್ಟು ಕಾರ್ಯನಿರ್ವಾಹಕ ಸಭೆಗೆ ಒಪ್ಪಿಸತಕ್ಕದ್ದು.

15. ಕಾರ್ಯದರ್ಶಿ ಮತ್ತು ಕೋಶಾಧಿಕಾರಿಗಳ ಸ್ಥಾನಗಳು ಅವರ ಅಭಾವದ ಅಥವಾ ಗೈರಹಾಜರಿಯ ಸಂಬಂಧ ಖಾಲಿಬಿದ್ದಲ್ಲಿ ಅಧ್ಯಕ್ಷರು ಇನ್ನೊಬ್ಬನನ್ನು ನೇಮಿಸತಕ್ಕದ್ದು. ಅಧ್ಯಕ್ಷರ ಅಥವಾ ಉಪಾಧ್ಯಕ್ಷರ ಸ್ಥಾ ನವು ಸ್ವಲ್ಪಕಾಲ ಖಾಲಿ ಬಿದ್ದಾಗ ಕಾರ್ಯನಿರ್ವಾಹಕ ಸಂಘದ ಉಳಿದ

ಮೆಂಬರರು ಸಭೆ ಸೇರಿ ತತ್ಕಾಲ ತಮ್ಮೊಳಗೊಬ್ಬನನ್ನು ಆ ಸ್ಥಾನಕ್ಕೆ ನಿ. ಕೊಳ್ಳಬಹುದು.

16. ಸಂಘದ ಬಗ್ಗೆ ವಂತಿಗೆಯನ್ನು ವಸೂಲು ಮಾಡಲು ಅವಶ್ಯವಾದ ವಿಲೆವಾರಿಗಳನ್ನು ಕಾರ್ಯನಿರ್ವಾಹಕ ಸಂಘವು ಮಾಡತಕ್ಕದ್ದು.

17. ಮಹಾಸಭೆಯಲ್ಲಾಗಲಿ ನೈಮಿತ್ತಿಕ ಮಹಾ ಸಭೆಯಲ್ಲಾಗಲಿ ಆದ ನಿರ್ಣಯಗಳನ್ನು ಬರೆದಿಡುವುದಕ್ಕಾಗಿ ಸಿದ್ಧವಾದ್ದೊಂದು ಪುಸ್ತಕದಲ್ಲಿ ಅವುಗಳನ್ನು ಬರೆದು ಅದಕ್ಕೆ ಅಧ್ಯಕ್ಷರು ಮತ್ತು ಕಾರ್ಯದರ್ಶಿಯು ದಸ್ಕತು ಮಾಡಿ ಇಡತಕ್ಕದ್ದು. ಇದರಂತೆ ಕಾರ್ಯನಿರ್ವಾಹಕ ಸಭೆಯಲ್ಲಾದ ಎಲ್ಲಾ ನಿರ್ಣಯಗಳನ್ನೂ ಉಪಕ್ರಮಗಳನ್ನೂ ಇನ್ನೊಂದು ಪುಸ್ತಕದಲ್ಲಿ ಬರೆದು ದಸ್ಕತುಮಾಡಿ ಇಡತಕ್ಕದ್ದು.

18. ಮಹಾ ಸಭೆಯ ಮತ್ತು ಕಾರ್ಯನಿರ್ವಾಹಕ ಸಭೆಯ ನಿರ್ಣಯಗಳನ್ನು ನ್ಯಾಯವಾದ ಕಾಲಗಳಲ್ಲೆಲ್ಲಾ ಮೆಂಬರರು ನೋಡಬಹುದು.

19. ಸಂಘೋದ್ದೇಶ ಸೂಚನೆಯಲ್ಲಿ ನಿರ್ದಿಷ್ಟವಾದ ಉದ್ದೇಶಗಳ ಪ್ರವರ್ತನೆಗೋಸ್ಕರ ಕಾರ್ಯನಿರ್ವಾಹಕ ಸಭೆಯು ಸಂಘದ ಹಣವನ್ನು ಉಪಯೋಗಿಸತಕ್ಕದ್ದು. ಸಂಘದ ಮೆಂಬರರು ಮಹಾ ಸಭೆಯನ್ನಾಗಲಿ ನೈಮಿತ್ತಿಕ ಮಹಾ ಸಭೆಯನಾಗಲಿ ಕೂಡಿಸಿ ಸಂಘದ ಅನುಮತಿಯನ್ನು ಮುಂದಾಗಿ ಪಡಕೊಂಡಲ್ಲದೆ ಅದರ ಉದ್ದೇಶಕ್ಕೂ ಹಿತಕ್ಕೂ ವಿರುದ್ಧವಾದ ಯಾವ ಕಾರ್ಯಕ್ಕಾದರೂ ಸಂಘದ ಸೊತ್ತನ್ನು ವಿನಿಯೋಗಿಸಲಿಕ್ಕಾಗಲೀ ಯಾವ ವಿಧದಿಂದಲಾದರೂ ಪರಾಧೀನ ಮಾಡಲಿಕ್ಕಾಗಲೀ ಕಾರ್ಯನಿರ್ವಾಹಕ ಸಂಘಕ್ಕೆ ಅಧಿಕಾರವಿಲ್ಲ.

20. ಸಂಘಕ್ಕೋಸ್ಕರ ಆರ್ಜಿಸತಕ್ಕ ಸೊತ್ತುಗಳನ್ನೆಲ್ಲಾ ಸಂಘದ ಹೆಸರಿನಲ್ಲಿಯೇ ಸಂಪಾದಿಸತಕ್ಕದ್ದು.

21. ಸಂಘದ ಅಥವಾ ಅದರ ಪೇಲನ ವ್ಯವಹರಣೆಯು ಅದರ ಕಾರ್ಯದರ್ಶಿಯ ಹೆಸರಲ್ಲಾಗಬಹುದು.

22. ಅಧ್ಯಕ್ಷರ ಗೈರಹಾಜರಿಯಲ್ಲಿ ಈ ಕ್ರಮಗಳನ್ನನುಸರಿಸಿ ಅವರ ಕರ್ತವ್ಯಗಳನ್ನು ಉಪಾಧ್ಯಕ್ಷರು ನಡೆಯಿಸತಕ್ಕದ್ದು.

3. ಕಾರ್ಯನಿರ್ವಾಹಕ ಸಭೆಯು ಈ ನಿಯಮಗಳಲ್ಲಿರುವ ಯಾವದೊಂದು ಅನ್ವಯಕ್ಕಾದರೂ ವಿರುದ್ಧವಾಗದಂತೆ ಈ ಕೆಳಗಿನ ವಿಷಯಗಳಲ್ಲಿ ಉಪನಿಬಂಧನೆಗಳನ್ನು ಮಾಡಲೂ ಅವಶ್ಯಕ ಸಂದರ್ಭಗಳಲ್ಲಿ ಅವುಗಳನ್ನು ಆಗಾಗ ತಿದ್ದುಪಡಿ ಮಾಡಲೂ ಬಹುದು.

(*a*) ಮೆಂಬರರನ್ನು ಸೇರಿಸಿಕೊಳ್ಳುವುದು, ಅಮಾನತು ಮಾಡುವುದು. (*b*) ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ಕೋಶಾಧಿಕಾರಿ ಇವರ ಕರ್ತವ್ಯ. (*c*) ಲೆಖ್ಖ ಪತ್ರಗಳನ್ನು ಇಡತಕ್ಕ ರೀತಿ, ಇಡಬೇಕಾದ ಲೆಖ್ಖ ಪುಸ್ತಕಗಳ ಸಂಖ್ಯೆ, ಲೆಖ್ಖ ಪತ್ರಗಳು ಇಂತಹವನ ಅಥವಾ ಇಂತಹವರ ವಶ ಇರಬೇಕೆಂಬದು, ಲೆಖ್ಖ ಪತ್ರಗಳ ಮೇಲ್ವಿಚಾರ ಮತ್ತು ಶೋಧನೆ. (*d*) ವಿದ್ಯಾರ್ಥಿ ಭವನ ಮತ್ತು ಅದಕ್ಕೆ ಸಂಬಂಧಪಟ್ಟ ಕಟ್ಟೋಣದ ಸುಧಾರಣೆ ಮತ್ತು ಮೇಲ್ವಿಚಾರ. (*e*) ವಿದ್ಯಾರ್ಥಿಭವನದ ಪುಸ್ತಕ ಭಂಡಾರದ, ಓದು ಮನೆಯ ಮತ್ತು ಸಂಘದ ಇತರ ಸ್ಥಾಪನೆಗಳ ಆಡಳಿತೆ. (*f*) ಉಚಿತಾರ್ಥ ಮತ್ತು ವಂತಿಗೆಗಳ ವಸೂಲಿ ಆ ಸಂಬಂಧವಾದ ವಿಷಯಗಳೆಲ್ಲಾ ಮತ್ತು ಸಂಘದ ಸಂಚಿತ ದ್ರವ್ಯದ ಭದ್ರತೆ. (*g*) ಸಂಘದ ಭಂಡಾರದಿಂದ ಹಣವನ್ನು ಕೊಡತಕ್ಕವರ್ಯಾರು ಸಂಘದ ಕಾರ್ಯೋದ್ದೇಶಗಳಿಗಾಗಿ ಯಾರ ಅಪ್ಪಣೆ ಪ್ರಕಾರ ಹಣವನ್ನು ಕೊಡತಕ್ಕದ್ದು; ಸಂಘಕ್ಕೆ ಬರತಕ್ಕ ಸಹಾಯ ಧನವನ್ನೂ ವಂತಿಗೆಯನ್ನೂ ಯಾರ ಕೈಯಲ್ಲಿ ಕೊಡಬೇಕು; ಮತ್ತು ಹಾಗೆ ಕೊಟ್ಟದ್ದಕ್ಕೆ ರಶೀದಿಯನ್ನು ಕೊಡತಕ್ಕವರ್ಯಾರು. (*h*) ಕ್ರಮಗಳನ್ನು ವಿಧಿಸಬೇಕಾಗಿ ತೋರುವ ಇತರ ಎಲ್ಲಾ ವಿಷಯಗಳು.

24. ಸಂಘದ ನಿಬಂಧನೆಗಳನ್ನು ಕಾಲೋಚಿತವಾಗಿ ಮಹಾ ಸಭೆಯಲ್ಲಾಗಲಿ ನೈಮಿತ್ತಿಕ ಮಹಾ ಸಭೆಯಲ್ಲಾಗಲಿ ತಿದ್ದಿಕೊಳ್ಳಬಹುದು. ಹೀಗೆ ಪರಿವರ್ತನೆ ಮಾಡಿದ ಕ್ರಮಗಳನ್ನು ಬರೆದ ಒಂದು ಪ್ರತಿಯನ್ನು ಸಂಘದ ಉದ್ದೇಶ ಸೂಚನೆಯ ಮತ್ತು ಪ್ರಾಥಮಿಕ ನಿಬಂಧನೆಗಳ ಸೆಂಗಡ ಇಟ್ಟಿರುವುದಕ್ಕಾಗಿ ಜ್ಯೊಂಟ್‌ಸ್ಟೋಕ್ ಕಂಪೆನಿಗಳ ರಿಜಿಸ್ಟ್ರಾರರಲ್ಲಿಗೆ ಕಳುಹಿಸತಕ್ಕದ್ದು.

25. ಮೆಂಬರರಿಗೆಲ್ಲಾ ಸಂಘದ ನಿಬಂಧನೆಗಳ ಒಂದೊಂದು ಪ್ರತಿಯನ್ನು ಹಂಚಬೇಕು. ಅವುಗಳಲ್ಲಿ ಹೆಚ್ಚಿನ ಪರಿವರ್ತನೆಗಳಾದಾಗ ಎಲ್ಲಾ

ನಿಬಂಧನೆಗಳ ಪುನರಾವೃತ್ತಿಯ ಪ್ರತಿಗಳನ್ನು ಮೆಂಬರರೊಳಗೆ ನಿವ್ವು ದಲ್ಲದೆ ಜ್ಯೊಂಟ್‌ಸ್ಟೋಕ್ ಕಂಪೆನಿಗಳ ರಿಜಿಸ್ಟ್ರಾರರಿಗೂ ಒಂದು ಪ್ರತಿಯನ್ನು ಕಳುಹಿಸತಕ್ಕದ್ದು.

26. ಬಂಟರ ಯಾನೆ ನಾಡವರ ಜಾತಿಯವರು ಮಾತ್ರ ಈ ಸಂಘದ ಮೆಂಬರಿಗೆ ಅರ್ಹರಾಗಿರುತ್ತಾರೆ.

27. ಸ್ಥಾಪಕ, ಸಹಾಯಕ, ಸಭ್ಯರೆಂಬ ಮೂರು ತೆರಗಳಾಗಿ ಮೆಂಬರರ ಹೆಸರೂ ವಿಳಾಸವೂ ತೋರುವ ಒಂದು ಪುಸ್ತಕ ಇಡತಕ್ಕದ್ದು; ಪ್ರತಿಯೊಬ್ಬನು ಕೊಟ್ಟ ಸಹಾಯಧನ ಇಷ್ಟೆಂದು ಆತನ ಹೆಸರಿನೆದುರಿಗೆ ಬರೆದಿಡಬೇಕು.

28. ಸಂಘಕ್ಕೆ ಯೋಗ್ಯವಾದ ಒಂದು ಮುದ್ರೆ ಇಡತಕ್ಕದ್ದು. ಅಂತಹ ಮುದ್ರೆಯು ಯಾರ ಸ್ವಾಧೀನ ಇರತಕ್ಕದ್ದು, ಯಾವಾಗ ಯಾವ ಸಂದರ್ಭದಲ್ಲಿ ಉಪಯೋಗಿಸತಕ್ಕದ್ದು ಎಂಬದನ್ನು ಕಾರ್ಯನಿರ್ವಾಹಕ ಸಭೆಯವರು ನಿರ್ಣಯಿಸಿದ ಪ್ರಕಾರ ವರ್ತಿಸತಕ್ಕದ್ದು.

Application for ~~the~~ alienation of land in which the proprietary right belongs to the State.

District.	.... South Kanara
Taluk.	... Udipi (S.No. 14
Village, estate or township.	... Badagabetu village in Udipi
Area in acres.	... A 4-60
Estimated freehold value.	... Rs 6037 - 8 - 0 5750
Estimated value subject to ground rent.	... Rs 287 - 8 - 0
Price received.	
Party or parties in whose favour alienated.	
Class of alienation as defined in paragraph 4 of the Government of India's resolution of 1872.	

10. Grounds for alienation.

11. Collector's recommendation.

12. R e m a r k s.

(Left half for use for draft, etc., in the Receiving office.)

Endorsement order, reference of other correspondence.

Receiving office No._____.

From The Inspector of Schools Bangalore

To The Director of Public Instruction, Madras

Re No. 359 Secn

Enclosures. 6

Date of despatch 2-8-21. C

Date of receipt



Subject.

Submitting a report regarding the Burst on Nadavar Sangha, with the Head-quarters at Mangalore

35

[C No 4749 D/21]

Alienation - land and Kaneme (Kanara) - Udipi Taluk & town - Madhwa Sangha - Hostel etc.,

To Under Secy

The estimated market value of the land is Rs 287-8-0 - Vide statement at page 4 c/r. The alienation is within the sanctioning powers of this Govt.

It is not known if any rent will be levied by the Sangha from students residing in the hostel. A Condition similar to the one in 2 (3) of G.O. No 1133 Fins D/20-5 may also be added. A draft of sanctioning the alienation is sent. It may be sent to Law (Govt) for acceptance

for the purposes of a hostel with play ground and a garden and for no other purposes.

2) The hostel shall be Commenced within a period of two years from the date of the grant

3) The rent, if any, Collected from the students occupying the hostel shall be limited to the amount necessary to reimburse the Sangha for the cost repairs to and upkeep of the hostel building.

The Government may resume the land wholly or in part in the event of the infringement ~~of~~ any of these Conditions or if Government Consider that the hostel is not properly Conducted or if resumption is Considered necessary in the public interests In the event of such resum

exceed the initial cost or the value at the time of resumption or acquisiti whichever shall be less, of the buildings which have been erected on the land at the cost of the sangha

(6) In the event of the voluntary relinquishment of the site by the Sangha no compensation shall be paid for any improvements that may have been effected or the works executed on the land the Sangha